‘ನಿನ್ನ ಮನಸ್ಸಿನಲ್ಲಿ ಇನ್ನೇನು ಅಚ್ಚಳಿಯದೆ ಉಳಿದಿದೆ?’ ಅವನು ನಗುತ್ತಾ ಕೇಳಿದನು.

ಇದ್ದಕ್ಕಿದಂತೆ ನ್ಯಾನ್ಸಿ ಎದ್ದುಬಿಟ್ಟಳು ಮತ್ತು ಚುರುಕಾಗಿ ಸ್ವಲ್ಪ ದೂರ ನಡೆದಳು.

‘ಏ, ಈಗ,’ ಅವಳು ಅವನನ್ನು ತರಾಟೆಗೆ ತೆಗೆದುಕೊಂಡಳು. ‘ಇದು ನ್ಯಾಯವಲ್ಲ! ನನ್ನನ್ನು ನಾನು ತುಂಟ ಹುಡುಗಿ ಎಂದು ಅಂದುಕೊಂಡಿದ್ದೆ.’

‘ನೀನು ಹಾಗಿರಲಿಲ್ಲ.’ ಅವನು ದೃಢವಾಗಿ ಹೇಳಿದನು. ‘ನನಗೆ ಈಗ ಕುಡಿಯಬೇಕು.’

ಅವಳು ಪಾನೀಯವನ್ನು ಸುರಿದಳು. ಅವಳ ಮುಖ ಇನ್ನೂ ಅವನಿಂದ ಬೇರೆಡೆ ತಿರುಗಿತ್ತು. ಅವನು ಮುಂದುವರೆಸಿದನು.

‘ಚುಂಬಿಸಲ್ಪಟ್ಟ ಪುಟ್ಟ ಹುಡುಗಿ ನೀನೊಬ್ಬಳೇ ಎಂದು ಯೋಚನೆ ಮಾಡ್ತಾ ಇದೀಯಾ?’

‘ಆ ವಿಷಯವನ್ನು ನೀನು ಇಷ್ಟ ಪಡ್ತೀಯಾ?’ ಅವಳು ಅದನ್ನು ಮುಂದುವರಿಸುವುದು ಬೇಡವೆಂಬಂತೆ ಕೇಳಿದಳು. ಆದರೆ ಅವಳ ಆ ಕ್ಷಣದ ಕಿರಿಕಿರಿ ಕರಗಿಹೋಯಿತು. ಮತ್ತು ಅವಳು ಹೇಳಿದಳು: ‘ಅದೇನು ಕರ್ಮವೋ! ನಾವು ಮೋಜು ಮಾಡಿದ್ವಿ, ಆ ಹಾಡಿನಲ್ಲಿ ಇದ್ದಂತೆ.’

‘ಆ ಜಾರುಬಂಡಿಯ ಸವಾರಿಯಲ್ಲಿ.’

‘ಹೌದು ಯಾರದೋ ಪಿಕ್ನಿಕ್ ಟ್ರೂಡಿ ಜೇಮ್ಸ್‌ದು. ಮತ್ತು ಅದು ಫ್ರಾಂಟೆನಾಕ್‌ನಲ್ಲಿ ಆ ಬೇಸಿಗೆಗಳಲ್ಲಿ.’

ಅವನಿಗೆ ತುಂಬಾ ನೆನಪಾಗುತ್ತಿದ್ದುದು ಜಾರುಬಂಡಿಯ ಸವಾರಿ ಮತ್ತು ಒಂದು ಮೂಲೆಯಲ್ಲಿ, ಹುಲ್ಲಿನಲ್ಲಿ, ಅವಳ ತಣ್ಣಗಿನ ಕೆನ್ನೆಗಳನ್ನು ಮುತ್ತಿಟ್ಟಿದ್ದು, ಆಗ ಅವಳು ತಣ್ಣಗಿನ ಬಿಳಿಯ ನಕ್ಷತ್ರಗಳ ಕಡೆ ನೋಡಿ ನಗುತ್ತಿದ್ದಳು. ಅವರ ಮುಂದೆ ಇದ್ದ ಜೋಡಿ ಅವರಿಗೆ ಬೆನ್ನು ಹಾಕಿತ್ತು ಮತ್ತು ಅವನು ಅವಳ ಪುಟ್ಟ ಕೊರಳನ್ನು ಮತ್ತು ಕಿವಿಗಳನ್ನು ಮುತ್ತಿಟ್ಟಿದ್ದ. ಆದರೆ ಅವಳ ತುಟಿಗಳಿಗೆ ಎಂದೂ ಮುತ್ತಿಟ್ಟಿರಲಿಲ್ಲ.

‘ಮತ್ತು ಆ ಮ್ಯಾಕ್ಸ್ ಪಾರ್ಟಿ’ಯಲ್ಲಿ ಅವರು ಅಂಚೆ ಕಚೇರಿಯ ಆಟವಾಡಿದ್ದರು. ಆದರೆ, ನನಗೆ ಹೋಗಲು ಆಗಿರಲಿಲ್ಲ. ಯಾಕೆಂದರೆ ನನಗೆ ಮಂಗನಬಾವು ಆಗಿತ್ತು.’ ಅವನು ಹೇಳಿದನು.

‘ನನಗೆ ಅದು ನೆನಪಿಲ್ಲ.’

‘ಓಹ್, ನೀನು ಅಲ್ಲಿ ಇದ್ದೆ. ನಿನ್ನನ್ನು ಚುಂಬಿಸಲಾಗಿತ್ತು ಮತ್ತು ಆಗ ನನಗೆ ಹಿಂದೆಂದೂ ಆಗದಷ್ಟು ಹೊಟ್ಟೆಕಿಚ್ಚಿನಿಂದ ಹುಚ್ಚು ಹಿಡಿದಂತಾಗಿತ್ತು.’

‘ಬಹಳ ತಮಾಷೆಯಾಗಿದೆ, ನನಗದು ನೆನಪಾಗುತ್ತಿಲ್ಲ. ಬಹಶಃ ನಾನು ಅದನ್ನು ಮರೆಯಲು ಬಯಸಿದ್ದೆ ಅನ್ನಿಸುತ್ತೆ.’

‘ಆದರೆ ಯಾಕೆ?’ ಅವನು ತಮಾಷೆಯಿಂದ ಕೇಳಿದನು. ‘ನಾವು ಸಂಪೂರ್ಣವಾಗಿ ಏನೂ ತಿಳಿಯದ ಮಕ್ಕಳಾಗಿದ್ದೆವು. ನ್ಯಾನ್ಸಿ, ನಾನು ಯಾವಾಗಲೂ ಕಳೆದುಹೋದ ದಿನಗಳ ಬಗ್ಗೆ ನನ್ನ ಹೆಂಡತಿಯ ಹತ್ತಿರ ಮಾತಾಡುತ್ತಿದ್ದಾಗ, ಅವಳನ್ನು ಪ್ರೀತಿ ಮಾಡಿದಷ್ಟೇ ಪ್ರೀತಿ ಮಾಡಿದ ಇನ್ನೋರ್ವ ಹುಡುಗಿಯೆಂದರೆ ಅದು ನೀನೇ ಎಂದು ಹೇಳಿದ್ದೆ. ನನಗನಿಸುತ್ತೆ ನಾನು ನಿಜವಾಗಿಯೂ ನಿನ್ನನ್ನು ಅಷ್ಟು ಪ್ರೀತಿ ಮಾಡುತ್ತಿದ್ದೆ. ನಾವು ಆ ಊರಿನಿಂದ ಬೇರೆಡೆ ಹೊರಟುಹೋದಾಗ ನಾನು ನಿನ್ನನ್ನು ನನ್ನೊಳಗೆ ಫಿರಂಗಿ ಚೆಂಡಿನಂತೆ ಒಳಗಿಟ್ಟು ತೆಗೆದುಕೊಂಡು ಹೋಗುತ್ತಿದ್ದೆ.’

‘ನೀನು ಅಷ್ಟೊಂದು ಹಚ್ಚಿಕೊಂಡಿದ್ದೆಯಾ?’